**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ,**

**ಬ್ಯಾಡಗಿ.**

**ಕ್ರಿ.ಮಿ ನಂ. 25/2023.**

**ಪಿ ಡಬ್ಲ್ಯೂಃ 1**

**ದಿನಾಂಕಃ 04-07-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಬಿ.ಹೆಚ್. ವಕೀಲರಿಂದಃ**

**6. 2020** ನೇ ಸಾಲಿನ ಮಾರ್ಚ್ ತಿಂಗಳಿನಲ್ಲಿ ನನ್ನ ಗಂಡ ನನ್ನ ತಂಗಿಯ ಕಡೆಯಿಂದ ಮನೆ ಕಟ್ಟುವುದಕ್ಕಾಗಿ ಸಾಲ ಪಡೆದಿದ್ದಕ್ಕೆ ಸಂಬಂಧಿಸಿದಂತೆ ನನ್ನ ತಂಗಿ ನನ್ನ ಗಂಡನ ವಿರುದ್ಧ ಪೋಲಿಸ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಚಿನ್ನಿಕಟ್ಟಿ ಗ್ರಾಮದಲ್ಲಿ ವಾಸವಾಗಿದ್ದೆ ಎಂದರೆ ಸರಿ. ಸದರಿ ದೂರು ದಾಖಲಿಸಿದ್ದಕ್ಕೆ ಸಂಬಂಧಿಸಿದಂತೆ ನಾನು ನನ್ನ ಗಂಡ ಪೋಲಿಸ್ ಠಾಣೆಗೆ ಹೋಗಿದ್ದೆವು ಎಂದರೆ ಸರಿ. ಸದರಿ ಸಮಯದಲ್ಲಿ ಕಾಗಿನೆಲೆ ಪೋಲಿಸ್ ಠಾಣೆಯಲ್ಲಿ ಬಳಿಗಾರ ಎಂಬುವವರು ಪಿ.ಎಸ್.ಐ ಇದ್ದರು ಎಂದರೆ ಸರಿ. ಸದರಿ ಪೋಲಿಸ ಠಾಣೆಗೆ ಚಿನ್ನಿಕಟ್ಟಿ ಗ್ರಾಮದ ಜಗದೀಶ ಎತ್ತಿನಮನಿ, ಅರುಣ ಚೆನ್ನಪ್ಪನವರ ಹಾಗೂ ಕಾಗಿನೆಲೆ ಗ್ರಾಮದ ಮಾಲತೇಶ ಕಟ್ಟಿಮನಿರವರು ಬಂದಿದ್ದರು ಎಂದರೆ ಸಾಕ್ಷಿ ಜನ ಬಂದಿದ್ದರು ಆದರೆ ಯಾರು ಎಂದು ಅವರ ಹೆಸರು ನನಗೆ ಗೊತ್ತಿಲ್ಲ. ಸದರಿ ಪೋಲಿಸ್ ಠಾಣೆಯಲ್ಲಿ ನನ್ನ ಗಂಡ ನನ್ನ ತಂಗಿಯ ಹಣವನ್ನು ನೀಡಿದರು ಎಂದರೆ ಸರಿಯಲ್ಲ. ಹಾಗೂ ಸದರಿ ದಿನ ಪೋಲಿಸರು ಹಾಗೂ ಸದರಿ ಪಂಚರು ನನಗೆ ನನ್ನ ಗಂಡನೊಂದಿಗೆ ಬಾಳುವೆ ಮಾಡುವಂತೆ ಹೇಳಿ ಕಳುಹಿಸಿದರು ಎಂದರೆ ಸರಿಯಲ್ಲ. ಸದರಿ ಹಣವನ್ನು ನನ್ನ ತಂಗಿಗೆ ಸದರಿ ದಿನ ನೀಡಿ ನನಗೆ ಸದರಿ ಪಂಚರು ಗಂಡನೊಂದಿಗೆ ಬಾಳುವೆ ಮಾಡುವಂತೆ ಹೇಳಿ ಕಳುಹಿಸಿದರೂ ಸಹ ಆ ರೀತಿ ಆಗಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಿಂದ ನಾನು ಈವರೆಗೂ ನನ್ನ ಗಂಡನೊಂದಿಗೆ ಬಾಳುವೆ ಮಾಡಲು ಹೋಗಿಲ್ಲ ಎಂದರೆ ಸರಿ.

ಸಾಕ್ಷಿ ಮುಂದುವರೆದು **1** ತಿಂಗಳು ಹೋಗಿದ್ದೆ ಆದರೆ ಎದುರುದಾರ ನನಗೆ ಹಾಗೂ ನನ್ನ ಮಕ್ಕಳಿಗೆ ಯಾವುದೇ ರೀತಿಯ ಆಹಾರ ಒದಗಿಸದೇ ಇದ್ದಿದ್ದರಿಂದ ಆತನ ಮನೆ ಬಿಟ್ಟು ಬಂದಿರುತ್ತೇನೆ ಎನ್ನುತ್ತಾರೆ. ಎದುರುದಾರ ನನಗೆ ಹಾಗೂ ನನ್ನ ಮಕ್ಕಳಿಗೆ ಯಾವುದೇ ರೀತಿಯ ಆಹಾರ ಒದಗಿಸದೇ ಇದ್ದಿದ್ದರಿಂದ ಆತನ ಮನೆ ಬಿಟ್ಟು ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**07.** ನಂಬಿಕೆಯ ಮೇಲೆ ಹೋಗುವ ಜೀವನ ಎಂದರೆ ಸರಿ. ನನ್ನ ಗಂಡ ನನ್ನ ಮದುವೆಯಾದಾಗಿನಿಂದ ನಾನು ಅವರ ಅತ್ತೆಯ ಮಗಳು ಆದ್ದರಿಂದ ನನ್ನೊಂದಿಗೆ ಅನ್ಯೋನ್ಯವಾಗಿ ಹೊಂದಾಣಿಕೆ ಮಾಡಿಕೊಂಡು ಬಾಳುವೆ ಮಾಡಿಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ಚಿನ್ನಿಕಟ್ಟೆ ಗ್ರಾಮದಲ್ಲಿ ನಾನು ಎದುರುದಾರನೊಂದಿಗೆ ಬಾಳುವೆ ಮಾಡುವ ಕಾಲಕ್ಕೆ ಆತ ನನ್ನನ್ನು ಯಾವತ್ತೂ ಯಾವುದೇ ಕೆಲಸಕ್ಕೆ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರ ಜಮೀನು ಉಳುಮೆ ಮಾಡುತ್ತಿಲ್ಲ ಎನ್ನುತ್ತಾರೆ. ಎದುರುದಾರ ನನ್ನ ಜೊತೆ ಪ್ರೀತಿ ವಿಶ್ವಾಸದಿಂದ ಬಾಳುವೆ ಮಾಡುತ್ತಿದ್ದರಿಂದ ಆತನೆ ದುಡಿದು ನಮ್ಮನ್ನು ನೋಡಿಕೊಳ್ಳುತ್ತಿದ್ದರಿಂದ ನನ್ನನ್ನು ಯಾವುದೇ ತರಹದ ಕೆಲಸಕ್ಕೆ ಕಳಹಿಸಿರಲಿಲ್ಲ ಎಂದರೆ ಸರಿಯಲ್ಲ. ಎದುರುದಾರ ನನ್ನನ್ನು ಕೂಲಿ ಮಾಡಲಿಕ್ಕೆ ಕಳುಹಿಸಿಲ್ಲ.

**08.** ನಾನು ಈ ಪ್ರಕರಣದಲ್ಲಿ ಹಾಜರು ಪಡಿಸಿದ ವೈದ್ಯಕೀಯ ದಾಖಲೆಗಳು ಈ ಪ್ರಕರಣ ದಾಖಲಿಸುವ ಮುಂಚೆಯ ದಾಖಲೆಗಳಾಗಿವೆ. ನನಗೆ ಇಂಗ್ಲೀಷ್ ಭಾಷೆ ಓದಲು ಬರೆಯಲು ಬರುವುದಿಲ್ಲ. ನಿಪಿ-**10** ರಲ್ಲಿ ನನ್ನ ಮಗನಿಗೆ ಸಂಬಂಧಿಸಿದ ಸ್ಕ್ಯಾನ್ ರಿಪೋರ್ಟನಲ್ಲಿ ಆತನ ಸ್ಥಿತಿ ಸಾಮಾನ್ಯವಾಗಿದೆ ಎಂದು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮಗನಿಗೆ ಯಾವುದೇ ಖಾಯಿಲೆ ವಗೈರೆ ಇಲ್ಲದೇ ಇದ್ದರೂ ಸಹ ಹೆಚ್ಚಿನ ಜೀವನಾಂಶ ಪಡೆಯುವ ಉದ್ದೇಶದಿಂದ ನಿಪಿ-**10** ಸುಳ್ಳು ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಆರ್-**1** ರಿಂದ **3** ನನ್ನ ಮಗಳ ನಿಶ್ಚಿತಾರ್ಥದ ಫೋಟೊಗಳು ಎಂದರೆ ಸರಿ. ಸದರಿ ನನ್ನ ಮಗಳ ನಿಶ್ಚಿತಾರ್ಥವನ್ನು ನನ್ನ ತಮ್ಮನ ಜೊತೆ ಮಾಡಲಾಗಿದೆ ಎಂದರೆ ಸರಿ.

**09.** ಗಂಡ ಹೆಂಡತಿ ಮದ್ಯೆ ಏನೇ ಭಿನ್ನಾಭಿಪ್ರಾಯ ಇದ್ದರೂ ಸಹ ಅವರ ಮಕ್ಕಳ ಮದುವೆ ವಿಚಾರ ಬಂದರೆ ಇಬ್ಬರೂ ಹೇಳಿ-ಕೇಳಿ ಮುಂದುವರೆಯುತ್ತಾರೆ ಎಂದರೆ ಸರಿ. ಗಂಡ-ಹೆಂಡತಿ ಮಾತನಾಡದಿದ್ದರೇ ಅವರ ಅಣ್ಣ-ತಮ್ಮಂದಿರ ಮೂಲಕ ವಿಷಯವನ್ನು ತಿಳಿಸುತ್ತಾರೆ ಎಂದರೆ ಸರಿ. ಸದರಿ ನನ್ನ ಮಗಳ ನಿಶ್ಚಿತಾರ್ಥಕ್ಕೆ ಸಂಬಂಧಿಸಿದಂತೆ ಎದುರುದಾರನ ಅಥವಾ ಆತನ ಸಂಬಂಧಿಕರ ಒಪ್ಪಿಗೆಯನ್ನು ಕೇಳಲಿಲ್ಲ. ಈಗ ನನ್ನ ಮಗಳ ಮದುವೆಯಾಗಿದೆ ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ **2** ಪೋಟೊಗಳು ನನ್ನ ಮಗಳ ಮದುವೆಯ ಪೋಟೊಗಳು ಎಂದರೆ ಸರಿ. ಸದರಿ ಪೋಟೊಗಳನ್ನು ನಿಆರ್-**4** ಮತ್ತು **5** ಎಂದು ಗುರುತಿಸಲಾಯಿತು. ನನ್ನ ಮಗಳ ಮದುವೆಗೆ ಎದುರುಗಾರರನ್ನು ಕರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಮಗಳಿಗೆ ಎದುರುಗಾರನನ್ನು ಕರೆಯುವುದು ಇಷ್ಟ ಇರಲಿಲ್ಲ ಎಂದು ಹೇಳಿರುತ್ತಾಳೆ. ನನ್ನ ಮಗಳಿಗೆ ಗೊತ್ತಾಗದ ಹಾಗೇ ನಾನು ಎದುರುದಾರರನ್ನು ಮದುವೆ ಕರೆಯಬಹುದಿತ್ತು ಎಂದರೆ ಸಾಕ್ಷಿ ನನ್ನ ಮಗಳಿಗೆ ಗೊತ್ತಾಗುತ್ತದೆ ಎನ್ನುತ್ತಾರೆ. ನಾನು ಎದುರುದಾರರನ್ನು ಮತತು ಆತನ ಸಂಬಂಧಿಕರನ್ನು ಉದ್ದೇಶ ಪೂರ್ವಕವಾಗಿ ನನ್ನ ಮಗಳ ಮದುವೆಗೆ ಆತ ನನಗೆ ಬೇಡ ಎಂದು ಕರೆದಿಲ್ಲ ಎಂದರೆ ಸರಿಯಲ್ಲ.

**10.** ಈಗ ನನ್ನ ಮಗಳು ಮದುವೆಯಾಗಿ ತನ್ನ ಗಂಡನ ಮನೆಯಲ್ಲಿ ಇದ್ದಾಳೆ ಎಂದರೆ ಸರಿ. ನನ್ನ ತಮ್ಮನಿಗೆ ಬಾರಂಗಿ ಗ್ರಾಮದಲ್ಲಿ ದೀಪಾ ಎಂಬುವವಳೊಟ್ಟಿಗೆ ಮದುವೆಯಾಗಿತ್ತು ಎಂದರೆ ಸರಿ. ಸದರಿ ದೀಪಾರವರಿಗೆ ಹಾಗೂ ನನ್ನ ತಮ್ಮನಿಗೆ ವಿಚ್ಛೇದನ ಆಗಿರುತ್ತದೆ ಎಂದರೆ ಸರಿ. ನನ್ನ ಮಗಳ ಮದುವೆಯ ಸಂಬಂಧ ನನ್ನ ತಮ್ಮನಿಗೆ **2** ನೇಯ ಸಂಬಂಧ ಆಗುತ್ತದೆ ಎಂದು ಗೊತ್ತಾದರೆ ಎದುರುದಾರ ಹಾಗೂ ಆತನ ಸಂಬಂಧಿಕರು ಮದುವೆಗೆ ವಿರೋಧ ವ್ಯಕ್ತಪಡಿಸುತ್ತಾರೆ ಎಂದು ತಿಳಿದು ಅವರಿಗೆ ಗೊತ್ತಾಗದ ಹಾಗೇ ನಾನು ನನ್ನ ಮಗಳ ಮದುವೆಯನ್ನು ನನ್ನ ತಮ್ಮನೊಂದಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮಗಳ ಮದುವೆಯನ್ನು ಮನೆಯ ಮುಂದೆ ಮಾಡಿದರೆ ಎದುರುದಾರನಿಗೆ ಗೊತ್ತಾಗುತ್ತದೆ ಎಂದು ತಿಳಿದು ನನ್ನ ಮಗಳ ಮದುವೆಯನ್ನು ಸಾಮೂಹಿಕ ವಿವಾಹದಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಾಮೂಹಿಕ ವಿವಾಹದಲ್ಲಿ

ಮಾಡಿರುತ್ತೇನೆ ಆದರೆ ಎದುರುದಾರನಿಗೆ ಗೊತ್ತಾಗುತ್ತದೆ ಎಂದು ಮಾಡಿರುವುದಿಲ್ಲ ಎನ್ನುತ್ತಾರೆ.

**11.** ಎದುರುದಾರನಿಗೆ **2020** ರಿಂದ ಡಯಾಬಿಟಿಸ್ ಹಾಗೂ ಶ್ವಾಸಕೋಸದ ತೊಂದರೆ ಇದೆ ಎಂದರೆ ಸರಿಯಲ್ಲ. ಆ ಬಗ್ಗೆ ವೈದ್ಯರು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುದಾರನಿಗೆ ಡಯಾಬಿಟಿಸ್ ಇದೆ ಎನ್ನುತ್ತಾರೆ. ಎದುರುದಾರನಿಗೆ ಶ್ವಾಸಕೋಸದ ತೊಂದರೆ ಇದೆ ಎಂದು ಒಪ್ಪಿಕೊಂಡರೆ ಜೀವನಾಂಶದ ಮೊತ್ತ ಕಡಿಮೆ ಆಗುತ್ತದೆ ಎಂದು ತಿಳಿದು ನಾನು ಎದುರುದಾರನಿಗೆ ಯಾವುದೇ ಖಾಯಿಲೆ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ಎದುರುದಾರನಿಗೆ ಡಯಾಬಿಟಿಸ್ ಇರುವುದರಿಂದ ಆತನ ಉಸಿರಾಟಕ್ಕೆ ತೊಂದರೆ ಆಗುತ್ತದೆ ಎಂದರೆ ಸರಿಯಲ್ಲ. ಎದುರುದಾರನಿಗೆ ಉಸಿರಾಟದ ತೊಂದರೆ ಇರುವುದರಿಂದ ವೈದ್ಯರು ಆತನಿಗೆ ದೂಳು ಇರುವ ಜಾಗದಲ್ಲಿ ಕೆಲಸ ಮಾಡಬಾರದು ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ವೈದ್ಯರು ಆ ತರಹ ಎದುರುದಾರನಿಗೆ ಸೂಚಿಸಿದ್ದರೂ ಸಹ ಸೂಚಿಸಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**12.** ನನ್ನ ಗಂಡ ಸಲ್ಲಿಸಿದ ತಕರಾರನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಗಂಡ ತನ್ನ ತಕರಾರಿನ **6** ನೇ ಪ್ಯಾರಾದಲ್ಲಿ ಏನು ಬರೆದಿದ್ದಾನೆ ಎಂದು ಓದಿ ತಿಳಿದುಕೊಂಡಿರುತ್ತೇನೆ. ಸಾಕ್ಷಿ ಮುಂದುವರೆದು ಈಗ ನನಗೆ ನೆನಪಿಲ್ಲ ಎನ್ನುತ್ತಾರೆ. ಸದರಿ ಪ್ಯಾರಾದಲ್ಲಿ ನನ್ನ ತವರು ಮನೆಯವರು ಬಡವರಾಗಿದ್ದು ಆದ್ದರಿಂದ ನನ್ನ ಮದುವೆಯ ಕಾಲಕ್ಕೆ ಎದುರುಗಾರನ ತಂದೆ-ತಾಯಿಯವರೇ ನನಗೆ **3** ತೊಲೆ ಬಂಗಾರ ಹಾಗೂ ಬಟ್ಟೆ ಕೊಡಿಸಿ ಮದುವೆಯ ಖರ್ಚನ್ನು ನೋಡಿ ಮದುವೆ ಮಾಡಿಕೊಂಡಿರುತ್ತಾರೆ ಎಂದು ಬರೆಯಿಸಿರುತ್ತಾನೆ ಎಂದರೆ ಸಾಕ್ಷಿ ಸುಳ್ಳು ಬರೆಯಿಸಿರುತ್ತಾನೆ ಎನ್ನುತ್ತಾರೆ.

**13.** ನಾನು **2023** ನೇ ಸಾಲಿನಲ್ಲಿ ಪೋಲಿಸರೊಂದಿಗೆ ಚಿನ್ನಿಕಟ್ಟೆ ಗ್ರಾಮಕ್ಕೆ ಬಂದಿದ್ದೆ ಎಂದರೆ ಸರಿ. ಸದರಿ ದಿನ ನಾನು ಎದುರುದಾರನ ಮನೆಯಿಂದ ರೂ.**50,000/-** ಹಣ, ಎದುರುದಾರನ ತಾಯಿಯ **15** ತೊಲೆಯ ಬೆಳ್ಳಿಯ ಸೊಂಟದ ಪಟ್ಟಿ, **5** ತೊಲೆ ಬಂಗಾರದ ತೀಕಿ ಹಾಗೂ **3** ತೊಲೆಯ ಬಂಗಾರದ ನೆತ್ತಿಯ ಹೂವನ್ನು ತೆಗೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಷಯ ಎದುರುದಾರನಿಗೆ

ಗೊತ್ತಾದರೂ ಸಹ ಆತ ಆತನ ಹೆಂಡತಿ ಮಕ್ಕಳು ಚೆನ್ನಾಗಿರಲಿ ಎಂದು ನಮ್ಮ ವಿರುದ್ಧ ಕ್ರಮ ಕೈಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಮೇಲೆ ಹೇಳಿದ ಹಣ ಹಾಗೂ ಆಭರಣಗಳನ್ನು ತೆಗೆದುಕೊಂಡು ಹೋಗಿದ್ದರೂ ಸಹ ಹೋಗಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**14.** ಯಾವುದಾದರೂ ವ್ಯಕ್ತಿಯ ಮೇಲೆ ಆಪಾಧನೆ ಹೊರಿಸಬೇಕು ಎಂದರೆ ಪ್ರತ್ಯೇಕ್ಷವಾಗಿ ಕಂಡರೆ ಮಾತ್ರ ಆಪಾಧನೆ ಹೊರಿಸಬೇಕು ಎಂದರೆ ಸರಿ. ನಾವು ಬೇರೆಯವರ ಮೇಲೆ ಆಪಾಧನೆ ಹೋರಿಸಬೇಕು ಎಂದರೆ ನಾವು ಮೊದಲು ಸರಿ ಇರಬೇಕು ಎಂದರೆ ಸರಿ. ನನ್ನ ಗಂಡ ಬೇರೆ ಮಹಿಳೆಯರೊಂದಿಗೆ ಓಡಾಡುತ್ತಾ ಎಂದು ಸುಳ್ಳು ಆಪಾಧನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ಈಗ ದಾವಣಗೆರೆ ಜಿಲ್ಲೆಯ ಶಾಮನೂರು ಗ್ರಾಮದಲ್ಲಿ ಶಾಲೆಗೆ ಹೋಗುತ್ತಾನೆ ಎಂದರೆ ಸರಿ. ನನ್ನ ಗಂಡ ನನ್ನ ಜೊತೆ ಅನ್ಯೋನ್ಯವಾಗಿದ್ದಾಗ ನನ್ನ ಮಗನನ್ನು ಎದುರುದಾರ ಒಳ್ಳೆಯ ಶಾಲೆಗೆ ಸೇರಿಸಿದ್ದ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**.

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಬ್ಯಾಡಗಿ.